ಕೃಷ್ಣರಾಜ ತಾಲ್ಲೂಕು ಸಾಲಿಗ್ರಾಮಕ್ಕೆ ಕುಡಿಯುವ ನೀರಿನ ಯೋಜನೆ

1109. ಶ್ರೀ ಹೆಚ್. ವಿಶ್ವನಾಥ್ (ಕೆ.ಆರ್. ನಗರ) : – ಮಾನ್ಯ ಗ್ರಾಮೀಣಾಭಿವೃದ್ಧಿ ಪಂಚಾಯತ್‌ರಾಜ್ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ –

ಅ) ಕೃಷ್ಣರಾಜನಗರ ತಾಲ್ಲೂಕು ಸಾಲಿಗ್ರಾಮಕ್ಕೆ ಕಾವೇರಿ ನದಿಗೆ ಅಡ್ಡಲಾಗಿರುವ ಬೆಳ್ಳೂರು ಅಣೆಕಟ್ಟೆಯಿಂದ ಕುಡಿಯುವ ನೀರು ಸರಬರಾಜು ಯೋಜನೆ ಮಂಜೂರಾತಿಗಾಗಿ ಸರ್ಕಾರದ ಮುಂದಿದೆಯೆ ;

ಆ) ಹಾಗಿದ್ದಲ್ಲಿ ಅದರ ಅಂದಾಜು ವೆಚ್ಚ ಎಷ್ಟು ;

ಇ) ಈ ವರ್ಷದಲ್ಲಿ ಅಣೆಕಟ್ಟಿನ ಕಾರ್ಯ ನಿರ್ವಹಿಸಲು ಮಂಜೂರಾತಿ ಮಾಡಲಾಗುವುದೆ?

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ (ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್‌ರಾಜ್ ಇಲಾಖೆ ಸಚಿವರು) –

ಅ) ಹೌದು.

ಆ) ರೂ. 35 ಲಕ್ಷಗಳು.

ಇ) ಆಡಳಿತಾತ್ಮಕ ಮಂಜೂರಾತಿ ವಿಷಯವು ಸರ್ಕಾರದ ಪರಿತೀಲನೆಯಲ್ಲಿದೆ.

ಬೆಂಗಳೂರು - ಮೈಸೂರು ರಸ್ತೆಯನ್ನು ರಾಷ್ಟ್ರೀಯ ಹೆದ್ದಾರಿಯಾಗಿ ಮಾಡುವುದು

1102. ಶ್ರೀ ಕೆ. ಹರ್ಷಕುಮಾರ್ ಗೌಡ (ಚಾಮರಾಜ):– ಮಾನ್ಯ ಲೋಕೋಪಯೋಗಿ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ –

ಅ) ಬೆಂಗಳೂರು - ಮೈಸೂರು ರಸ್ತೆಯನ್ನು ರಾಷ್ಟ್ರೀಯ ಹೆದ್ದಾರಿಯ ಪಟ್ಟಿಯಲ್ಲಿ ಸೇರಿಸಲಾಗಿದೆಯೆ?

ಆ) ಸೇರಿದ್ದಲ್ಲಿ ಈ ರಸ್ತೆಯ ಕಾರ್ಯವನ್ನು ಯಾವಾಗ ಪ್ರಾರಂಭಿಸಲಾಗುವುದು?

ಇ) ಈ ಕಾರ್ಯಕ್ಕೆ ಖರ್ಚಾಗುವ ಅಂದಾಜು ಹಣದ ಮೊತ್ತವೆಷ್ಟು?

ಶ್ರೀ ಜಿ.ಹೆಚ್. ಅಶ್ವತ್ಥ್ ರೆಡ್ಡಿ (ಲೋಕೋಪಯೋಗಿ ಸಚಿವರು) –

ಅ) ಹೌದು

ಆ) ಪ್ರಸ್ತಾವನೆಗೆ ಕೇಂದ್ರ ಸರ್ಕಾರದ ಒಪ್ಪಿಗೆ ಇನ್ನೂ ದೊರೆತಿಲ್ಲವಾದ್ದರಿಂದ ಈ ಪ್ರಶ್ನೆ ಉದ್ಭವಿಸುವುದಿಲ್ಲ.

ಇ) ಮೇಲಿನ ಉತ್ತರದಿಂದ ಈ ಪ್ರಶ್ನೆ ಉದ್ಭವಿಸುವುದಿಲ್ಲ.

ಕೃಷ್ಣಾ ನದಿಕೊಳ್ಳದಲ್ಲಿ ಪೂರ್ಣಗೊಂಡಿರುವ ನೀರಾವರಿ ಯೋಜನೆಗಳು

1471. ಡಾ. ಮಲಕ ರೆಡ್ಡಿ (ಯಾದಗಿರಿ) :– ಮಾನ್ಯ ಭಾರಿ ಮತ್ತು ಮಧ್ಯಮ ನೀರಾವರಿ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ –

ಅ) ಕೃಷ್ಣಾ ನದಿಕೊಳ್ಳದಲ್ಲಿ ಪೂರ್ಣಗೊಂಡಿರುವ ನೀರಾವರಿ ಯೋಜನೆಗಳು ಯಾವುವು ;

ಆ) ಪೂರ್ಣಗೊಳ್ಳುತ್ತಿರುವ ಯೋಜನೆಗಳ ಸಂಖ್ಯೆ ಎಷ್ಟು ;

ಇ) ಮೇಲ್ಕಂಡ ನೀರಾವರಿ ಯೋಜನೆಗಳನ್ನು ಪೂರ್ಣಗೊಳಿಸಲು ಬೇಕಾದ ಹಣ ;

ಈ) ಮೇಲ್ಕಂಡ ನೀರಾವರಿ ಯೋಜನೆಗಳನ್ನು ಪೂರ್ಣಗೊಳಿಸಲು ಬೇಕಾಗುವ ಅಂದಾಜು ಸಮಯ (ತಿಂಗಳು ಮತ್ತು ವರ್ಷ) (ಯೋಜನಾವಾರು ವಿವರಗಳನ್ನು ನೀಡುವುದು) ;

ಉ) ಈ ದಿನದಂತೆ ಪ್ರತಿ ಯೋಜನೆಯಲ್ಲಿ ನೀರಾವರಿಯಾಗುತ್ತಿರುವ ಎಕರೆಗಳ ಸಂಖ್ಯೆ?

ಶ್ರೀ ಮಲ್ಲಿಕಾರ್ಜುನ ಎಸ್. ಪಾಟೀಲ್. (ಭಾರಿ ಮತ್ತು ಮಧ್ಯಮ ನೀರಾವರಿ ಸಚಿವರು) –

ಅ) ಯೋಜನೆಗಳ ಹೆಸರನ್ನು ಲಗತ್ತಿಸಲಾಗಿರುವ ಪಟ್ಟಿ - 1 ರಲ್ಲಿ ಕೊಡಲಾಗಿದೆ.

ಆ) 1) ಭಾರಿ ಯೋಜನೆಗಳು - 9
2) ಮಧ್ಯಮ ಯೋಜನೆಗಳು - 6
ಒಟ್ಟು - 15

ಇ) 1) ಭಾರಿ ಯೋಜನೆಗಳು - 1613 ಕೋಟಿ ರೂ.ಗಳು
2) ಮಧ್ಯಮ ಯೋಜನೆಗಳು – 119 ಕೋಟಿ ರೂ.ಗಳು
ಒಟ್ಟು – 1732 ಕೋಟಿ ರೂ.ಗಳು

ಈ) ಯೋಜನಾವಾರು ವಿವರಗಳನ್ನು ಲಗತ್ತಿಸಲಾಗಿರುವ ಪಟ್ಟಿ - 2 ರಲ್ಲಿ ಕೊಡಲಾಗಿದೆ.

ಉ) 11,72,523 ಎಕರೆಗಳು.

ಅನುಬಂಧ - 1

ಕ್ರಮ ಸಂಖ್ಯೆ	ಯೋಜನೆ	ಪೂರ್ಣಗೊಂಡ ವರ್ಷ	ಬಳಸಿಕೊಳ್ಳುವ ನೀರು (ಟಿ.ಎಂ.ಸಿ ಗಳಲ್ಲಿ)	ನೀರಾವರಿ ಸಾಮರ್ಥ್ಯ (ಹೆಕ್ಟೇರ್ ಗಳಲ್ಲಿ)	ಖರ್ಚಾದ ಹಣ (ಲಕ್ಷ ರೂ.ಗಳಲ್ಲಿ)	ಲಾಭವಾಗತಕ್ಕ ಜಿಲ್ಲೆಗಳು
1	2	3	4	5	6	7
ಅ)	ಭಾರಿ ನೀರಾವರಿ ಯೋಜನೆಗಳು :-					
1.	ಘಟ್ಟಪ್ರಭ 1 ಮತ್ತು 2	1980	32.45	139383	7226	ಬೆಳಗಾಂ, ಬಿಜಾಪುರ
2.	ತುಂಗಾ ಅಣೆಕಟ್ಟು	1956	11.50	8704	331	ಶಿವಮೊಗ್ಗ
3.	ವಾಣಿವಿಲಾಸ ಸಾಗರ	1908	8.20	9190	45	ಚಿತ್ರದುರ್ಗ
4.	ವಿಜಯನಗರ ಕಾಲುವೆಗಳು	1600	12.05	12210	ದೊರಕುವುದಿಲ್ಲ.	ಬಳ್ಳಾರಿ ರಾಯಚೂರು
	ಒಟ್ಟು ಭಾರಿ ಯೋಜನೆಗಳು :		64.20	169487	7602	
ಆ)	ಮಧ್ಯಮ ನೀರಾವರಿ ಯೋಜನೆಗಳು :-					
1.	ಅಂಬ್ಲಿಗೊಳ	1964	1.40	2955	116	ಶಿವಮೊಗ್ಗ
2.	ಅಂಜನಾಪುರ	1936	2.50	6736	21	ಶಿವಮೊಗ್ಗ
3.	ಅರಿಶಂಕರ್	1957	0.38	1255	22	ಬಿಜಾಪುರ
4.	ಭದ್ರಾ ಅಣೆಕಟ್ಟು	1923	3.10	4466	ದೊರಕುವಿದಿಲ್ಲ.	ಚಿಕ್ಕಮಗಳೂರು
5.	ಚಂದ್ರಪಲ್ಲಿ	1972	1.90	5223	185	ಗುಲ್ಬರ್ಗ
6.	ಬಿಟ್ಟವಾಡಗಿ	1971	0.26	891	41	ಬಿಜಾಪುರ, ರಾಯಚೂರು
7.	ಧರ್ಮ	1964	2.20	5668	133	ಧಾರವಾಡ, ಉತ್ತರ ಕನ್ನಡ

1	2	3	4	5	6	7
8.	ಗಾಯಿತ್ರಿ	1963	0.5	2305	40	ಚಿತ್ರದುರ್ಗ
9.	ಗೋಕಾಕ್ ಕಾಲುವೆ	1897	1.40	5757	ದೊರಕು ವುದಿಲ್ಲ	ಬೆಳಗಾಂ
10.	ಹಗರಿಬೊಮ್ಮನಹಳ್ಳಿ	1978	2.00	2966	395	ಬಳ್ಳಾರಿ
11.	ಹಾಧಿಕೋನಿ	1973	0.50	2145	84	ಗುಲ್ಬರ್ಗಾ
12.	ಜಂಬದಹಳ್ಳ	1968	0.70	1538	115	ಚಿಕ್ಕಮಗಳೂರು
13.	ಕಲಾಸಕೋಪ್	1960	0.33	1143	20	ಬಿಜಾಪುರ
14.	ಕನಕನಾಲಾ	1975	0.40	2064	100	ರಾಯಚೂರು
15.	ಕೊಳಚಿಮೇರ್	1953	0.53	1275	43	ಬೆಳಗಾಂ
16.	ನಾಗತಾನ	1961	0.08	650	15	ಬಿಜಾಪುರ
17.	ನಾರಾಯಣಪುರ	1961	0.60	1624	34	ಚಿತ್ರದುರ್ಗ
18.	ನಾರಿಹಳ್ಳ	1979	0.90	1512	320	ಬಳ್ಳಾರಿ
19.	ರಾಜೋಲಿ ಬಂಡ	1960	1.20	2383	52	ರಾಯಚೂರು
20.	ರಾಮನಹಳ್ಳಿ	1958	0.44	1943	42	ಬಿಜಾಪುರ
21.	ಸೌಧಾಗರ್	1987	0.26	1417	557	ಗುಲ್ಬರ್ಗಾ
22.	ಮುಲ್ಲಾಮಾರಿ ಮೇಲ್ದಂಡೆ		1.24	3279	1536	ಗುಲ್ಬರ್ಗಾ, ಬೀದರ್
	ಒಟ್ಟು ಮಧ್ಯಮ ಯೋಜನೆಗಳು		22.77	59192	3871	
	ಒಟ್ಟು (ಭಾರಿ ಮತ್ತು ಮಧ್ಯಮ ಯೋಜನೆಗಳು)		86.97	228679	11473	

ಜಿಲ್ಲಾ ಪರಿಷತ್ ಇಂಜಿನೀಯರಿಂಗ್ ವಿಭಾಗಗಳಲ್ಲಿ ಸೇವೆ ಸಲ್ಲಿಸುತ್ತಿರುವ ಗ್ಯಾಂಗ್ ಮನ್‌ಗಳ ಸೇವೆ ಖಾಯಂ.

1400. ಶ್ರೀ ರುಕ್ಮಯ ಪೂಜಾರಿ (ವಿಟ್ಲ) :– ಮಾನ್ಯ ಲೋಕೋಪಯೋಗಿ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ –

ಅ) ರಾಜ್ಯದ ಜಿಲ್ಲಾ ಪರಿಷತ್ ಇಂಜಿನೀಯರಿಂಗ್ ವಿಭಾಗಗಳಲ್ಲಿ ಕಾರ್ಯ ನಿರ್ವಹಿಸುತ್ತಿರುವ ಗ್ಯಾಂಗ್ ಮನ್‌ಗಳ ಸೇವೆಯನ್ನು ಖಾಯಂ ಮಾಡುವ ಉದ್ದೇಶ ಸರಕಾರಕ್ಕೆ ಇದೆಯೇ ;

ಆ) ಹಾಗಿದ್ದಲ್ಲಿ ಹಿಂದೆ ಲೋಕೋಪಯೋಗಿ ಇಲಾಖೆಯಲ್ಲಿ ಕಾರ್ಯ ನಿರ್ವಹಿಸುತ್ತಿದ್ದ ಇವರೆಲ್ಲರೂ ಜಿಲ್ಲಾ ಪರಿಷತ್ ಇಂಜನೀಯರಿಂಗ್ ವಿಭಾಗಗಳಿಗೆ ನಿಯೋಜಿಸಲ್ಪಟ್ಟವರಲ್ಲವೇ ;

ಇ) ಜಿಲ್ಲಾ ಪರಿಷತ್ ಇಂಜಿನೀಯರಿಂಗ್ ವಿಭಾಗದಲ್ಲಿ ದುಡಿಯುತ್ತಿರುವ ಗ್ಯಾಂಗ್‌ಮನ್‌ಗಳ ಸೇವೆಯನ್ನು ಎಂದಿನಿಂದ ಖಾಯಂಗೊಳಿಸಲಾಗುವುದು?

ಶ್ರೀ ಜಿ.ಎಚ್. ಅಶ್ವತ್ಥ್ ರೆಡ್ಡಿ (ಲೋಕೋಪಯೋಗಿ ಸಚಿವರು) –

ಅ) ದಿನಗೂಲಿ ನೌಕರರಿಗೆ ಸಂಬಂಧಿಸಿದಂತೆ ಸರ್ವೋಚ್ಚ ನ್ಯಾಯಾಲಯದ ಪ್ರಕರಣ ಸಂಖ್ಯೆ 8307–11:83 ರಲ್ಲಿನ ತೀರ್ಪಿನಂತೆ , ಅವರುಗಳ ಸೇವೆಯನ್ನು ಸಕ್ರಮಗೊಳಿಸುವ ಬಗ್ಗೆ ಕ್ರಮ ತೆಗೆದುಕೊಂಡಿದೆ.

ಆ) ಜಿಲ್ಲಾ ಪರಿಷತ್‌ಗೆ ವರ್ಗಾಯಿಸಿದ ರಸ್ತೆಗಳ ಪ್ರಮಾಣಕ್ಕೆ ಅನುಸರಿಸಿ ಸಂಬಂಧಪಟ್ಟ ಗ್ಯಾಂಗಮನ್ ಗಳನ್ನು ಜಿಲ್ಲಾ ಪರಿಷತ್‌ಗೆ ನೀಡಿರುತ್ತದೆ.

ಇ) ಸರ್ವೋಚ್ಚ ನ್ಯಾಯಾಲಯದ ತೀರ್ಪಿನಂತೆ ಕ್ರಮ ತೆಗೆದುಕೊಳ್ಳಲಾಗುತ್ತಿದೆ.